# ಹೊಸಕಾಲದ ನವಾಬ!



ಒಂದೆಡೆ ಮಹಾತ್ವಾಕಾಂಕ್ಷೆಯ ಗಗನಕುಸುಮ ಕಿತ್ತುತರುವ ಹಂಬಲ ಎಲ್ಲರ ಎದೆಯಲ್ಲಿಯೂ ಉಕ್ಕುತ್ತಿದ್ದರೆ, ಇನ್ನೊಂದೆಡೆ ಕುಟುಂಬ ವ್ಯವಸ್ಥೆಯ ಬೇರುಗಳು ಸಡಿಲುಗೊಳ್ಳುತ್ತಿವೆ. ಈ ವೈರುಧ್ಯವನ್ನು ಒಂದು ನಾಯಿಯ ಮೂಲಕ ವಿಡಂಬನಾತ್ಮಕವಾಗಿ ಚಿತ್ರಿಸುವ ಕಿರುಚಿತ್ರ 'ನವಾಬ್'.

■ ಗೌರಿ

'ನವಾಬ್' ಹೆಸರು ಕೇಳಿದರೆ ಒಂದು ರಾಯಲ್ ವ್ಯಕ್ತಿಯ ಚಿತ್ರವೊಂದು ಮನಸಲ್ಲಿ ಮೂಡಿ ನಿಲ್ಲುತ್ತದೆಯೇ? ಈ ನವಾಬ ರಾಯಲ್ ಅಲ್ಲ; ನಾಯಿ!

ವಿಡಂಬನೆಯ ಸಣ್ಣ ಎಳೆಯನ್ನು ಇಟ್ಟುಕೊಂಡು ಆಧುನಿಕ ಕಾಲದ ಮಹತ್ವಾಕಾಂಕ್ಷೆಗಳು ಮತ್ತು ಅದರಿಂದ ಕುಟುಂಬ ವ್ಯವಸ್ಥೆಯಲ್ಲಿ ಉಂಟಾಗುವ ಏರುಪೇರುಗಳನ್ನು ಹೇಳುವ ಕಿರುಚಿತ್ರ 'ನವಾಬ್.'

ನಿಖಿಲ್ ಮತ್ತು ದೇವಿಕಾ ಇಬ್ಬರೂ ಹೊಸದಾಗಿ ಮದುವೆಯಾಗಿರುವವರು. ಆದರೆ ದೇವಿಕಾಗೆ ವೃತ್ತಿಯಲ್ಲಿ ಮೇಲಕ್ಕೇರುವ ಮಹತ್ವಾಕಾಂಕ್ಷೆ. ಆ ಮಹತ್ವಾಕಾಂಕ್ಷೆಯ ಚುಂಗು ಹಿಡಿದೇ ಅವಳು ಅಮೆರಿಕಕ್ಕೆ ಹೊರಟುನಿಂತಿದ್ದಾಳೆ. ನಿಖಿಲ್‌ನ ಜೊತೆಗಿನ ಸಂಬಂಧವೂ ಅವಳಿಗೆ ಸಾಕು ಅನಿಸಿದೆ. ಆದರೆ ಅದನ್ನು ನೇರವಾಗಿ ಹೇಳುತ್ತಿಲ್ಲ.

ಅವರಿಬ್ಬರೂ ಜೊತೆಗೆ ಚೆನ್ನಾಗಿದ್ದಾಗ ಇಬ್ಬರೂ ಸೇರಿ ಸಾಕಿದ ನಾಯಿ 'ನವಾಬ್'. ಬೇರಾಗುವಾಗ ಆ ನಾಯಿಯನ್ನು ಯಾರು ನೋಡಿಕೊಳ್ಳುವುದು ಎಂಬ ಪ್ರಶ್ನೆ ಏಳುತ್ತದೆ. ನಿಖಿಲ್, 'ಇದು ನಿನ್ನ ನಾಯಿ, ನೀನೇ ತೆಗೆದುಕೊಂಡು ಹೋಗು' ಎಂದು ಅವನು ಹೇಳುತ್ತಾನೆ. 'ಇಲ್ಲ, ಇದನ್ನು ತಂದಿದ್ದು ನೀನು. ಅಮೆರಿಕದಲ್ಲಿ ನಾನು ಎಲ್ಲಿರುತ್ತೇನೆ ಎಂಬುದೇ ನನಗೆ ಗೊತ್ತಿಲ್ಲ. ಇನ್ನು ಈ ನಾಯಿಯನ್ನು ಹೇಗೆ ಕೊಂಡೊಯ್ಯಲಿ?' ಎಂಬುದು ದೇವಿಕಾ ಪ್ರಶ್ನೆ. ಕೊನೆಗೆ ನಾಯಿಯನ್ನು ಮನೆಯಲ್ಲಿಯೇ ಬಿಟ್ಟು ಹೊರಟುಬಿಡುತ್ತಾಳೆ. ಮೊದಲೇ ಸಂಸಾರ ಮುರಿದುಬಿದ್ದ ದುಃಖದಲ್ಲಿರುವ ನಿಖಿಲ್ ಆ ನಾಯಿಯನ್ನು ಏನು ಮಾಡುವುದು ಎಂಬುದು ತಿಳಿಯದೇ ಒದ್ದಾಡುತ್ತಾನೆ. ಅದನ್ನು ಮನೆಯಿಂದ ದಾಟಿಸಲು ಅವನು ಪಡುವ ಪಡಿಪಾಟಲುಗಳೇ ಚಿತ್ರದ ಎಳೆ.



**ಹೆಸರು:** ನವಾಬ್ (ಹಿಂದಿ)
**ನಿರ್ದೇಶನ:** ಮಾನ್ಸಿ ಜೈನ್
**ನಿರ್ಮಾಣ:** ಅಭಿನವ್ ಸಿಂಗ್
**ಛಾಯಾಗ್ರಹಣ:** ದೇವಶಿಶ್ ರೆಮಿದಲಾಯಿ
**ಸಂಕಲನ:** ಜಬೀನ್ ಮರ್ಚಂಟ್
**ಧ್ವನಿ:** ಯಾತ್ರಿಕ್ ದೇವ್
**ಸಂಗೀತ:** ಹರ್ಷದ್ ಶೆಟ್ಟಿ
**ತಾರಾಗಣ:** ಅಪಾರಶಕ್ತಿ ಖುರಾನಾ, ಗೀತಿಕಾ ವಿದ್ಯಾ, ಮಾರಿಯಾ ಗೊರೆಟಿ, ಮಲ್ಲಿಕಾ ದುವಾ

'ಸೌಲಭ್ಯ, ಸುಖ ಬೇಕು; ಆದರೆ ಜವಾಬ್ದಾರಿ ಬೇಡ' ಎಂಬುದು ಇಂದಿನ ಹೊಸ ತಲೆಮಾರಿನ ಬದುಕಿನ ಒಂದು ಗುಣ. ಈ ಗುಣವನ್ನು ನಿರ್ದೇಶಕರು 'ನವಾಬ' ಎಂಬ ಹೆಸರಿನ ನಾಯಿಯ ಮೂಲಕ ವಿಡಂಬನಾತ್ಮಕವಾಗಿ ಚಿತ್ರಿಸುವ ಕೆಲಸ ಮಾಡಿದ್ದಾರೆ. ಪ್ರೀತಿಯ ದ್ಯೋತಕವಾಗಿದ್ದ, ಮನೆಯ ಖುಷಿಯ ಸೆಲೆಯಾಗಿದ್ದ ಅದೇ ಪ್ರಾಣಿ ಕೊನೆಗೆ ಒಂದು ತೊಡಕಾಗಿ ಪರಿಣಮಿಸುವ ವಿಪರ್ಯಾಸದ ಮೂಲಕವೇ ಕೌಟುಂಬಿಕ ಮೌಲ್ಯಗಳ ಪಲ್ಲಟವನ್ನೂ ನಿರ್ದೇಶಕರು ಸೂಚಿಸಿದ್ದಾರೆ.

ತಾಂತ್ರಿಕವಾಗಿಯೂ ಈ ಕಿರುಚಿತ್ರ ಗಟ್ಟಿಯಾಗಿದೆ. ಕಥೆಯ ಓಟಕ್ಕೆ ಅಸಹಜವೆನಿಸದೆ ಛಾಯಾಗ್ರಹಣ, ಹದವಾದ ಹಿನ್ನೆಲೆ ಸಂಗೀತಗಳು ತೆಳುವಾದ ಹಾಸ್ಯದ ಎಳೆಯ ಪರಿಣಾಮವನ್ನು ಹೆಚ್ಚಿಸಿವೆ. ಎಲ್ಲಿಯೂ ಸಲ್ಲದ ನಾಯಿಯ ಪರಿಸ್ಥಿತಿಯೂ, ಚಿತ್ರದ ನಾಯಕನ ಪರಿಸ್ಥಿತಿಯೂ ತುಂಬ ವ್ಯತ್ಯಾಸವನ್ನು ಹೊಂದಿಲ್ಲ. ಅವನಿಗೆ ಹೆಂಡತಿ ಬರಬಹುದು ಎಂಬ ಆಸೆಯಿದೆ. 'ನವಾಬ್'ಗೆ ತನ್ನ ಒಡೆಯ ತನ್ನನ್ನು ಬಿಟ್ಟು ಬಿಡಲಾರ ಎಂಬ ನಂಬಿಕೆ ಇದೆ. ಹಾಗಾಗಿಯೇ ಅದು ರಸ್ತೆ ಮಧ್ಯ ಅವನು ಬಿಟ್ಟು ಹೊರಟರೂ ಕೊಂಚವೂ ಕದಲದೇ ಅವನಿಗಾಗಿ ಕಾಯುತ್ತದೆ.

ಈ ಕಿರುಚಿತ್ರದ ಅಂತ್ಯದಲ್ಲಿಯೂ ಕೌಟುಂಬಿಕತೆಗೆ ಹೊಸ ಅರ್ಥವನ್ನು ಹೊಳೆಯಿಸುವ ಪ್ರಯತ್ನವನ್ನು ನಿರ್ದೇಶಕರು ಮಾಡಿದ್ದಾರೆ. ನವಾಬನನ್ನು ಬಿಟ್ಟು ಬರಲು 'ಪೆಟ್ ಕೇರ್'ಗೆ ಹೋಗುವ ನಿಖಿಲ್, ಅಲ್ಲಿಂದ ಇನ್ನೊಂದು ನಾಯಿಯನ್ನು ಮನೆಗೆ ಕರೆತರುತ್ತಾನೆ. ಅದನ್ನು ಮುದ್ದಾಡುತ್ತ ತನ್ನ ಬದುಕಿನಲ್ಲಿ ಕಳೆದುಕೊಂಡಿರುವ ನೆಮ್ಮದಿಯನ್ನು ಹುಡುಕಿಕೊಳ್ಳಲೆತ್ನಿಸುತ್ತಾನೆ. ಮಹತ್ವಾಕಾಂಕ್ಷೆಗಳ ಹಿಂದೆ ಬಿದ್ದು ವೈಯಕ್ತಿಕ ಬದುಕನ್ನು ಬಲಿಕೊಡುವ ಒಂದು ಅತಿರೇಕದ ವಿರುದ್ಧವಾಗಿ ತನ್ನ 'ಕುಟುಂಬ'ದ ಚೌಕಟ್ಟನ್ನು ಮನುಷ್ಯರಿಂದ ಪ್ರಾಣಿಗಳಿಗೂ ಹಿಗ್ಗಿಸಿಕೊಳ್ಳುವ ಇನ್ನೊಂದು ಮಾನವೀಯ ಮುಖದೊಂದಿಗೆ 'ನವಾಬ್' ಕಿರುಚಿತ್ರ ಮುಕ್ತಾಯಗೊಳ್ಳುತ್ತದೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/2UVFIf8 ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.